**ಪತ್ರಿಕಾ ಪ್ರಕಟಣೆ**

ವಿಜಯಪುರ

ದಿನಾಂಕ: 22.07.2021.

**1] ವಿಜಯಪುರ ಗ್ರಾಮೀಣ ಪೊಲೀಸ ಠಾಣೆ ಗುನ್ನೆ ನಂ: 214/2021 ಕಲಂ: 302, 307 ಐಪಿಸಿ.**

ದಿನಾಂಕ: 21.07.2021 ರಂದು ನಸುಕಿನ 02.00 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಬಾಳು ರಾಮು ಜಾಧವ ಸಾ: ತೊರವಿ ತಾಂಡಾ ನಂ-1. ಈತನು ತನಗೆ ಆಸ್ತಿಯಲ್ಲಿ ಸರಿಯಾಗಿ ಪಾಲು ಮಾಡಿರುವದಿಲ್ಲ. ತನಗೆ ಮನೆ ಕಟ್ಟಿಸಿಕೊಟ್ಟಿರುವದಿಲ್ಲ ಅಂತಾ ಇದರಲ್ಲಿಯ ಫಿರ್ಯಾದಿಯ ತಂದೆ ಬಾಳು ರಾಮು ಜಾಧವ ವಯಾ 48 ವರ್ಷ ಈತನ ಮೇಲೆ ಸಿಟ್ಟಾಗಿ, ಅವನಿಗೆ ಕೊಲೆ ಮಾಡುವ ಉದ್ದೇಶದಿಂದ ಕಬ್ಬಿಣದ ಕೊಡಲಿಯಿಂದ ಕುತ್ತಿಗೆಗೆ ಹೊಡೆದು ಕೊಲೆ ಮಾಡಿದ್ದು, ಅಲ್ಲದೇ ಬಿಡಿಸಲು ಹೋದ ಫಿರ್ಯಾದಿಯ ತಾಯಿ ಅಕ್ಕುಬಾಯಿ ಗಂಡ ಬಾಳು ಜಾಧವ ವಯಾ 40 ವರ್ಷ ಇವಳಿಗೂ ಸಹ ಕೊಲೆ ಮಾಡುವ ಉದ್ದೇಶದಿಂದ ಅದೇ ಕೊಡಲಿಯಿಂದ ತಲೆಗೆ ಹೊಡೆದು ಕೊಲೆ ಮಾಡಲು ಪ್ರಯತ್ನಿಸಿದ್ದು ಇರುತ್ತದೆ ಅಂತಾ ವಗೈರೆ ಫಿರ್ಯಾದಿಯಲ್ಲಿ ನಮೂದ ಇರುತ್ತದೆ. ಈ ಬಗ್ಗೆ ಅರುಣಕುಮಾರ ತಂದೆ ಬಾಳು ಜಾಧವ ವಯಾ 28 ವರ್ಷ ಜಾತಿ ಹಿಂದು ಲಂಬಾಣಿ ಉದ್ಯೋಗ ಒಕ್ಕಲುತನ ಸಾ: ತೊರವಿ ತಾಂಡಾ ನಂ-1 ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 21.07.2021 ರಂದು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ವಿಜಯಪುರ ಗ್ರಾಮೀಣ ಪೊಲೀಸ ಠಾಣೆ ಗುನ್ನಾ. ನಂ: 215/2021 ಕಲಂ: 279, 304(ಎ) ಐಪಿಸಿ**

ದಿನಾಂಕ 20.07.2021 ರಂದು 18.00 ಗಂಟೆ ಸುಮಾರಿಗೆ ಇದರಲ್ಲಿ ಮೃತ ಆರೋಪಿತನಾದ ಶ್ರೀಮಂತ ತಂಗುರುನಾಥ ಚವ್ಹಾಣ ವಯಾ 26 ವರ್ಷ ಸಾ॥ ಮಕಣಾಪೂರ ತಾಂಡಾ ನಂ-2 ಮೋಟರ ಸೈಕಲ್ ನಂ ಕೆಎ:28 ಇಡಬ್ಲೂ:1374 ನೇದ್ದರ ಚಾಲಕ ಈತನು ತನ್ನ ಮೋಟರ ಸೈಕಲ್ ನಂಬರ ಕೆಎ:28 ಇಡಬ್ಲೂ:1374 ನೇದ್ದನ್ನು ತಗೆದುಕೊಂಡು ಸಿದ್ದಾಪೂರಕ್ಕೆ ಹೋಗಿ ಮರಳಿ ಬರುವಾಗ ಸಿದ್ದಾಪೂರ ಶಿರನಾಳ ರಸ್ತೆಯ ಆನಂದ ಮಾನೆ ಇವರ ಜಮೀನದ ಶ್ರೀಮಂತ ಇವನು ತನ್ನ ಮೋಟರ ಸೈಕಲ್‌ನ್ನು ಅತೀ ಜೋರಾಗಿ ಮತ್ತು ನಿಸ್ಕಾಳಜಿಯಿಂದ ನಡೆಯಿಸಿ ಕರ್ವಿಂಗ್‌ದಲ್ಲಿ ಮೋಟರ ಸೈಕಲ್ ಹೊರಳಿಸಲು ಆಗದೆ ಮೋಟರ ಸೈಕಲ್ ರಸ್ತೆ ಬಿಟ್ಟು ಆನಂದ ಮಾನೆ ಇವರ ಜಮೀನದಲ್ಲಿ ಹೋಗಿ ಮೋಟರಸೈಕಲ್‌ವನ್ನು ತನ್ನ ಮೈಮೇಲೆ ಕೆಡವಿಕೊಂಡು ತನ್ನಿಂದ ತಾನೆ ಅಪಘಾತ ಮಾಡಿಕೊಂಡು ತೆಲೆಗೆ ಎಡಣ್ಣಿನ ಹತ್ತಿರ ಗಾಯ ಪೆಟ್ಟು ಪಡಿಸಿಕೊಂಡು ಮೃತನಾಗಿದ್ದು ಇರುತ್ತದೆ. ಈ ಬಗ್ಗೆ ಗುರುನಾಥ ಸೇವು ಚವ್ಹಾಣ ಸಾ॥ ಮಕಣಾಪೂರ ತಾಂಡಾ ನಂ-2 ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 21.07,2021 ರಂದು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಹೊರ್ತಿ ಪೊಲೀಸ ಠಾಣೆ ಗುನ್ನಾ. ನಂ: 91/2021 ಕಲಂ: 279, 337, 338, 304(ಎ) ಐಪಿಸಿ.**

ದಿನಾಂಕ 21.07.2021 ರಂದು 15:30 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತನಾದ ನಂಬರ ಇಲ್ಲದ ಹಿರೋ ಹೊಂಡಾ ಸಿಡಿ ಡಾನ್ ಕಂಪನಿಯ ಮೋಟಾರ ಸೈಕಲ ಚೆಸ್ಸಿ ನಂ:03027 ಎಫ್:10196 ನೇದ್ದರ ಸವಾರ ಹೆಸರು ವಿಳಾಸ ತಿಳಿದು ಬಂದಿರುವದಿಲ್ಲ. ಪಿರ್ಯಾದಿಯ ತಮ್ಮ ರಾಕೇಶ ಮತ್ತು ಪಿರ್ಯಾದಿಯ ತಾಯಿ ಭೌರಮ್ಮ ಇವರು ತಮ್ಮ ಹಿರೋ ಹೊಂಡಾ ಸ್ಪಂಡರ ಪ್ರೋ ಮೋಟಾರ ಸೈಕಲ ನಂ: ಕೆಎ-28-ಡಬ್ಲ್ಯೂ-8186 ನೆದ್ದರ ಮೇಲೆ ತಾಂಬಾದಿಂದ ವಿಜಯಪೂರಕ್ಕೆ ಹೋಗಿ ಪಿರ್ಯಾದಿಗೆ ಬೇಟಿಯಾಗಿ ಮಾತಾಡಿಸಿ ಮರಳಿ ಅಥರ್ಗಾ ಮಾರ್ಗವಾಗಿ ತಾಂಬಾದ ಕಡೆಗೆ ಹೊರಟಾಗ ಎದುರುಗಡೆಯಿಂದ ನಂಬರ ಇಲ್ಲದ ಹಿರೋ ಹೊಂಡಾ ಸಿಡಿ ಡಾನ್ ಮೋಟಾರ ಸೈಕಲ ನೇದ್ದರ ಸವಾರನು ತನ್ನ ಮೋಟಾರ ಸೈಕಲ ಮೇಲೆ ಹಿಂದುಗಡೆ ಇಬ್ಬರನ್ನು ಕೂಡಿಸಿಕೊಂಡು ಬಹಳ ಜೋರಾಗಿ ಮತ್ತು ನಿರ್ಲಕ್ಷತದಿಂದ ನಡೆಯಿಸಿಕೊಂಡು ಬಂದು ಪಿರ್ಯಾದಿಯ ತಮ್ಮ ರಾಕೇಶ ಇವನ ಮೋಟಾರ ಸೈಕಲಕ್ಕೆ ಡಿಕ್ಕಿ ಹೊಡೆದು ಅಪಘಾತ ಪಡಿಸಿ ಪಿರ್ಯಾದಿಯ ತಾಯಿ ಭೌರಮ್ಮ ಇವಳಿಗೆ ಸ್ಥಳದಲ್ಲಿಯೇ ಮರಣ ಪಡಿಸಿ ರಾಕೇಶ ಇವನಿಗೆ ಹಾಗೂ ತನ್ನ ಮೋಟಾರ ಸೈಕಲ ಮೇಲೆ ಇದ್ದ ಇಬ್ಬರು ಹಿಂಬದಿ ಸವಾರರಿಗೆ ಸಾದಾ ಮತ್ತು ಬಾರೀ ಸ್ವರೂಪದ ಗಾಯ ಪೆಟ್ಟು ಪಡಿಸಿದ್ದು ಅಲ್ಲದೇ ತಾನು ಸಹ ಸಾದಾ ಮತ್ತು ಬಾರೀ ಗಾಯ ಪೆಟ್ಟು ಹೊಂದಿದ ಅಪರಾಧ. ಈ ಬಗ್ಗೆ ಅಶ್ವಿನಿ ನಾಗಪ್ಪ ಬಾಗಲಕೋಟ ಸಾ॥ ತಾಂಬಾ ತಾ॥ ಇಂಡಿ ಹಾಲಿ ವಸ್ತಿ ವಿಜಯಪೂರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 21.07,2021 ರಂದು ಹೊರ್ತಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.